# ದೊಡ್ಡಾಟದ 'ಬಣಗಾರ'



★ ಚಿತ್ರ- ಬರಹ: **ವಿಶಾಲಾಕ್ಷಿ ಅಕ್ಕಿ**

ಜಾಗತೀಕರಣದ ಅಬ್ಬರಕ್ಕೆ ಜನರೆದೆಯ ಪದಗಳು ಥಂಡು ಹೊಡೆದ ಹೊತ್ತಿನಲ್ಲಿ ಮಲಗಿದ ಆ ಹಾಡುಗಳನ್ನು ಬಡಿದೆಬ್ಬಿಸುವ ಪ್ರಯತ್ನವೊಂದು ಹುಲಸೋಗಿಯಲ್ಲಿ ಸದ್ದಿಲ್ಲದೇ ನಡೆಯಿತು. ಇತಿಹಾಸದ ಪುಟಗಳನ್ನು ಸೇರುತ್ತಿದ್ದ ದೊಡ್ಡಾಟಕ್ಕೆ, ಆ ಪದಗಳಿಗೆ, ಆ ಜನಗಳಿಗೆ, ಅವರ ಮಾತುಗಳಿಗೆ ಮರುಹುಟ್ಟು ಕೊಡುವ ಯತ್ನವಾಗಿತ್ತು ಅದು.

ಅದು 1990ರ ಹೊತ್ತು. ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಹುಲಸೋಗಿಯಲ್ಲಿ ಇಂಥ ಪ್ರಯತ್ನ ನಡೆದಾಗ 'ಇದೇನ್ ದೊಡ್ಡಾಟ ನಡೀತಪ್ಪಾ...'ಎಂದು ನಕ್ಕವರೇ ಹೆಚ್ಚು. ನಗಲು ಆ ಹೊತ್ತಿಗೆ ಕಾರಣವೂ ಇತ್ತು; ಹೆಚ್ಚು ಸಂಬಳದ ಕಾಲೇಜು ಪ್ರಾಧ್ಯಾಪಕರ ಕೆಲಸವನ್ನು ಕೈಬಿಟ್ಟು ಬಂದ ಪ್ರೊ. ಟಿ.ಬಿ. ಸೊಲಬಕ್ಕನವರ ಅವರು ದೊಡ್ಡಾಟಕ್ಕಾಗಿ ಹುಲಸೋಗಿ ಎಂಬ ಹಳ್ಳಿಯಲ್ಲಿ 'ರಾಜ್ಯ ದೊಡ್ಡಾಟ (ಬಯಲಾಟ) ಟ್ರಸ್ಟ್' ಕಟ್ಟಿದರು! ಇಂಥ ಹುಚ್ಚು ಸಾಹಸ ಮಾಡಿದ್ದಕ್ಕಾಗಿ ಅವರು ಕುಹಕ ಕೇಳಬೇಕಾಗಿ ಬಂತು; ಕಷ್ಟ ಸಹಿಸಬೇಕಾಗಿ ಬಂತು.

ದೊಡ್ಡಾಟ ಮತ್ತೆ ಜನರ ನಡುವೆ ಉಸಿರಾಡುವಂತೆ ಮಾಡಬೇಕು ಅಂದುಕೊಂಡ ಅವರು, ತಮ್ಮ ಟ್ರಸ್ಟ್ ಮೂಲಕ ಯುವಕರಿಗೆ ಡಿಪ್ಲೊಮಾ ಮಾದರಿಯ ದೊಡ್ಡಾಟದ ಕೋರ್ಸುಗಳನ್ನು ಆರಂಭಿಸಿದರು. ನಿಜ ಹೇಳಬೇಕೆಂದರೆ ಜಾನಪದ ವಿಶ್ವವಿದ್ಯಾಲಯದ ಕನಸಿನ ಬೀಜ ಮೊಳೆತದ್ದು ಅಲ್ಲಿಯೇ ಎನ್ನಬೇಕು. ಅವರ ಈ ಸಾಹಸಕ್ಕೆ ಅನೇಕ ರೈತರು, –ಕಲಾವಿದರು,– ಯುವಕರು ಜೊತೆಗೂಡಿದರು. ಇನ್ನೂ ಕೆಲವರನ್ನು ಕರೆತಂದರು. ಹೀಗೆ ಬೆಳಕಿಗೆ ಬಂದವರಲ್ಲಿ ಶಿಗ್ಗಾಂವಿಯ ದೊಡ್ಡಾಟದ ವೇಷಭೂಷಣ ಹಾಗೂ ಪ್ರಸಾಧನ ಕಲಾವಿದ ಶಂಕರ ಅರ್ಕಸಾಲಿ ಅವರೂ ಒಬ್ಬರು.

ತಮ್ಮ ಅಜ್ಜ, ಕಲಾವಿದ, ಸ್ವಾತಂತ್ರ್ಯ ಹೋರಾಟಗಾರ ರಾಮಣ್ಣ ಅವರಿಂದ ಸಿದ್ಧಿಸಿಕೊಂಡ ಪ್ರಸಾಧನ ಕಲೆಯ ಪ್ರದರ್ಶನಕ್ಕೆ ಶಂಕರ ಅರ್ಕಸಾಲಿ ಅವರಿಗೆ ಹೆಚ್ಚು ಅವಕಾಶ ಸಿಕ್ಕಿದ್ದು, ದೊಡ್ಡಾಟ ಟ್ರಸ್ಟ್ ಮೂಲಕ. ಅಜ್ಜನ ಜೊತೆಗೆ, ಅವರಿಂದ ಬಳುವಳಿಯಾಗಿ ಪಡೆದು ಜತನವಾಗಿಟ್ಟ ದೊಡ್ಡಾಟದ ವೇಷಭೂಷಣಗಳನ್ನು ಮತ್ತಷ್ಟು ಜಗಮಗಿಸುವಂತೆ ಮಾಡಿದರು.

ಶಿಗ್ಗಾಂವಿಯಿಂದ ಹುಲಸೋಗಿಗೆ ಹೋಗಿ ಹೊಸ ಹುಡುಗರಿಗೆ ವೇಷ ತೊಡಿಸಿದರು; ಬಣ್ಣ ಹಚ್ಚಿದರು. ಅಜ್ಜ ರಾಮಣ್ಣ ಅವರಿಂದ ನಾಜೂಕು ಕೆಲಸ ಕಲಿತ ಶಂಕರ ಅರ್ಕಸಾಲಿ, ದೊಡ್ಡಾಟ–ಸಣ್ಣಾಟಗಳಿಗೆ ಬೇಕಾದ ಮುಖವರ್ಣಿಕೆ, ವೇಷಭೂಷಣ, ರಂಗಪರಿಕರಗಳನ್ನು ತಯಾರಿಸುವಲ್ಲಿ ಸಿದ್ಧಹಸ್ತರಾದರು. ದೊಡ್ಡಾಟ ಟ್ರಸ್ಟ್ ಬೆಂಬಲವೂ ಜೊತೆಗಿತ್ತು; ಅಜ್ಜನ ನಿರೀಕ್ಷೆ ಹುಸಿಯಾಗದಂತೆ ಬಣ್ಣದ ಬದುಕನ್ನು ಒಪ್ಪಿ––ಅಪ್ಪಿಕೊಂಡು ಬಿಟ್ಟರು. ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅಚ್ಚಿಗೆ ಮೊಳೆ ಜೋಡಿಸುವ ಕೆಲಸ ಮಾಡುತ್ತಲೇ ದೊಡ್ಡಾಟ ಕಲಾವಿದರ ವೇಷಭೂಷಣಗಳಿಗೆ ಕುಸುರಿ ಮಾಡುವುದನ್ನೂ ಕಲಿತರು. ಪಾತ್ರಕ್ಕೊಪ್ಪುವ ಬಣ್ಣ ಹಚ್ಚುವುದನ್ನೂ ಕಲಿತರು. ಅಲ್ಲಿಂದ ಮುಂದೆ ಹುಲಸೋಗಿಯ ದೊಡ್ಡಾಟ ಟ್ರಸ್ಟ್‌ನಿಂದ ರಾಜ್ಯದಾದ್ಯಂತ ಪ್ರದರ್ಶನಗೊಂಡ 'ಏಕಲವ್ಯ', 'ಕುರುಕ್ಷೇತ್ರ', 'ಏಳುಕೊಳ್ಳದ ಎಲ್ಲಮ್ಮ', 'ಕಿತ್ತೂರು ಚೆನ್ನಮ್ಮ', 'ಬಸವ ವಿಜಯ' ಹೀಗೆ ಹಲವಾರು ಪ್ರಯೋಗಗಳಿಗೆ ಅವರು ವೇಷಭೂಷಣ ಒದಗಿಸಿ, ಮೇಕಪ್ ಮಾಡಿದರು. ಅವರ ಬಳಿಯಿರುವ ದೊಡ್ಡಾಟದ ವೇಷಭೂಷಣಗಳು ಟಿ.ಎಸ್. ನಾಗಾಭರಣ ಅವರ ಸಿಂಗಾರೆವ್ವ ಚಲನಚಿತ್ರದಲ್ಲಿಯೂ ಬಳಕೆಯಾಗಿವೆ.

ರಾಜ್ಯದ ವಿವಿಧೆಡೆಯಲ್ಲಿ ತಮ್ಮ ಬಣ್ಣಗಾರಿಕೆ ಕಲೆಯನ್ನು ಪ್ರದರ್ಶಿಸಿರುವ ಶಂಕರ ಅರ್ಕಸಾಲಿ, ಬೆಂಗಳೂರು ದೂರದರ್ಶನ 'ಜಾನಪದ ಜಗತ್ತು' ಕಾರ್ಯಕ್ರಮದಲ್ಲಿ ಪ್ರಸಾರವಾದ ಮುಳಗುಂದ ಕಲಾವಿದರ 'ಅಶ್ವಮೇಧ ಯಾಗ' ಹಾಗೂ 'ನಾಗಪಾಶ' ದೊಡ್ಡಾಟದ ಕಲಾವಿದರಿಗೆ ಬಣ್ಣ ಹಚ್ಚಿದ್ದಾರೆ. ಸುತ್ತೂರು ಸಂಸ್ಥಾನ ಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ದಾವಣಗೆರೆ, ಹಾವೇರಿ, ಗದಗ, ಸಂಕೇಶ್ವರ, ಕೊಪ್ಪಳ, ಅಥಣಿ, ಬೆಳಗಾವಿ, ಉಡುಪಿ, ಹುಬ್ಬಳ್ಳಿ–ಧಾರವಾಡ ಹೀಗೆ ರಾಜ್ಯದಾದ್ಯಂತ ಪ್ರದರ್ಶನಗೊಂಡ 'ದೊಡ್ಡಾಟಗಳ ಅಡ್ಡಾಟ'ದ ಕಲಾವಿದರಿಗೆ ವೇಷಭೂಷಣ ಒದಗಿಸಿ, ಮೇಕಪ್ ಮಾಡಿದ್ದಾರೆ.

ಹೀಗೆ ಕಳೆದ 20 ವರ್ಷದಿಂದ ಬಣ್ಣದ ಬದುಕನ್ನೇ ನಡೆಸುತ್ತಿರುವ ಶಂಕರ, ಮಕ್ಕಳಿಗಾಗಿ ದೊಡ್ಡಾಟದ ಶಿಬಿರ ಎಲ್ಲೇ ನಡೆದರೂ ಅಲ್ಲಿ ಹಾಜರು. ಶಂಕರ ತಮ್ಮ ಅಜ್ಜನಿಂದ ಬಳುವಳಿಯಾಗಿ ಬಂದ ಅಪರೂಪದ ಸಾಮಗ್ರಿಗಳನ್ನು ಜತನವಾಗಿಟ್ಟಿದ್ದಾರೆ. ■